ಒ ಎಸ್ 63/2019 ಪಿ.ಡಬ್ಲ್ಯೂ 1

ಇಂದು ದಿಃ 13.10.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ

ನನ್ನ ತಂದೆ ಹೆಸರು ಚನ್ನಂಜಪ್ಪ. ನನ್ನ ತಂದೆ ಮೃತಪಟ್ಟು ಸುಮಾರು 50 ವರ್ಷ ಮೇಲ್ಪಟ್ಟಿರುತ್ತದೆ. ನನ್ನ ತಂದೆ ತಾಯಿಗೆ ನಂಜಪ್ಪ, ಬಸಪ್ಪ, ತಾಯಪ್ಪ, ಕೆಂಪದೇವಮ್ಮ ಮತ್ತು ನಾವೆಲ್ಲರು ಮಕ್ಕಳು ಎಂದರೆ ಸರಿ. ಆ ಪೈಕಿ ನನ್ನನ್ನು ಹೊರತುಪಡಿಸಿ ಉಳಿದರವರು ಮೃತಪಟ್ಟಿರುತ್ತಾರೆ. ಕೆಂಪದೇವಮ್ಮನ ಮಗಳು ಶಾಂತಮ್ಮ. ಕೆಂಪದೇವಮ್ಮನ ಮಗಳು ನಿಂಗಮಣಿ ಮೃತರಾಗಿದ್ದಾರೆ, ರತ್ನಮ್ಮ ಇದ್ದಾರೆ. ರತ್ನಮ್ಮರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ತಾಯಕ್ಕ ಯಾನೆ ಮಹದೇವಮ್ಮನಿಗೆ ವಾದಿ ರೂಪ ಒಬ್ಬಳೇ ಮಗಳು, ಬೇರೆ ಯಾರು ಮಕ್ಕಳಿಲ್ಲ.

ಪ್ರತಿವಾದಿಯ ಗಂಡ ಸೊಳ್ಳಾಪುರದವರು. ಅವರು ಸುಮಾರು 50 ವರ್ಷ ಮೇಲ್ಮಪಟ್ಟು ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸುಳ್ಳು ಖಾತೆ ಮಾಡಿಸಿಕೊಂಡು ಇದ್ದಾರೆ. ಪ್ರತಿವಾದಿಯ ಗಂಡನ ತಂದೆಯ ಹೆಸರು ಕೆಂಚನಂಜಪ್ಪ ಎಂದರೆ ಸರಿ. ಕೆಂಪ ನಂಜಪ್ಪ ಜೀವಂತ ಇದ್ದಾಗ ದಾವಾ ಆಸ್ತಿಯನ್ನು ಅವರೆ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಕೆಂಪ ನಂಜಪ್ಪ ಮೃತಪಟ್ಟ ನಂತರ ಪ್ರತಿವಾದಿಯ ಗಂಡ ಉಳುಮೆ ಮಾಡುತ್ತಿದ್ದರು ಎಂದರೆ ಎಲ್ಲರೂ ಉಳುಮೆ ಮಾಡುತ್ತಿದ್ದೆವು ಎನ್ನುತ್ತಾರೆ. ಪ್ರತಿವಾದಿಯ ಗಂಡನ ಹೆಸರು ಆರ್ ಟಿ ಸಿ ಯಲ್ಲಿ ಬರುತ್ತಿತ್ತು, ಆದರೇ ಡಿಕ್ಲೇರಷನ್ ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಂಜಪ್ಪ ಮತ್ತು ಬಸಪ್ಪ ಮೊದಲೇ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ ಮತ್ತು ಅದನ್ನು ಮಾರಿಕೊಂಡಿದ್ದರು. ನಂಜಪ್ಪ 1 ಎಕರೆ ಆಸ್ತಿಯನ್ನು ಕೆಂಪದೇವಮ್ಮನಿಗೆ ಅರಶಿನ ಕುಂಕುಮವಾಗಿ ಕೊಟ್ಟಿದ್ದರು ಎಂದರೆ ಸುಳ್ಳು. ಪ್ರತಿವಾದಿಯನ್ನು ಸೊಳ್ಳಾಪುರದ ಶಿವಣ್ಣನಿಗೆ ಮದುವೆ ಮಾಡಿದ್ದಾರೆ ಎಂದರೆ ಸರಿ. 1 ಎಕರೆ ಆಸ್ತಿಯನ್ನು ನಂಜಪ್ಪನವರು ಅರಶಿನ ಕುಂಕುಮವಾಗಿ ಕೊಟ್ಟಿದ್ದಾರೆ ಎಂದರೆ ಸುಳ್ಳು. ಆ ಲಾಗಾಯಿತಿನಿಂದ ದಾವಾ ಆಸ್ತಿಯ ಖಾತೆಯನ್ನು 1ನೇ ಪ್ರತಿವಾದಿ ಮತ್ತು ಅವರ ಗಂಡ ಬದಲಾವಣೆ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ ಆದರೆ ನಾವೆಲ್ಲಾ ಒಟ್ಟಿಗೆ ಇದ್ದು, ನಾವು ಮೈಸೂರಿಗೆ ಹೋದ ನಂತರ ಆ ರೀತಿ ಖಾತೆ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ನಾವೆಲ್ಲ ಬೇರೆ ಬೇರೆ ಇದ್ದೆವು ಎಂದರೆ ಸರಿಯಲ್ಲ. ನಂಜಪ್ಪ ಮತ್ತು ಬಸಪ್ಪ ಆಸ್ತಿಯನ್ನು ಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಚನ್ನಂಜಪ್ಪ ಬದುಕಿದ್ದಾಗಲೇ ನಮ್ಮ ಮದುವೆ ಮಾಡಿದ್ದರು ಎಂದರೆ ಸರಿ. ನಂಜಪ್ಪ, ಬಸಪ್ಪ ಮತ್ತು ಮಹದೇವಮ್ಮ ಬೇರೆ ಬೇರೆ ವಾಸ ಇದ್ದರು ಎಂದರೆ ಸರಿ. ದಾವಾ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿಗಳು ಕುಟುಂಬದಲ್ಲಿವೆ ಎಂದರೆ ಇಲ್ಲ.

ದಾವಾ ಆಸ್ತಿಯ ಸುತ್ತಮುತ್ತ ನಾಗರಾಜು, ಕುಮಾರ ಮತ್ತು ನಂಜಪ್ಪರವರ ಆಸ್ತಿ ಇದೆ ಆದರೆ ಯಾವ ದಿಕ್ಕು ಎಂದು ಗೊತ್ತಿಲ್ಲ. ದಾವಾ ಆಸ್ತಿಯಲಿ ಶಿವಣ್ಣ ಮತ್ತು ಅವರ ತಂದೆ ಕಾಲದಿಂದ 70 ವರ್ಷದಿಂದ ಸ್ವಾಧೀನ ಇದ್ದು ನನಗೆ ಭಾಗ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಕೆಂಪದೇವಮ್ಮನಿಗೆ 1 ಎಕರೆ ಆಸ್ತಿಯು ಅರಿಶಿನ ಕುಂಕುಮದಲ್ಲಿ ಕೊಟ್ಟಿದ್ದು ನಂತರ ಅವರು ಹಲವಾರು ವ್ಯಕ್ತಿಗಳಿಗೆ ಭೋಗ್ಯವನ್ನು ಸಹ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ದಕ್ಷಿಣದ ಕಡೆಗೆ ಹೇಮಂತ್ ಮತ್ತು ತೊಂದರೆ ಕೊಡುತ್ತಿದ್ದ ಕಾರಣ ಪ್ರತಿವಾದಿ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಅರ್ಜಿ ಸಲ್ಲಿಸಿ ಡಿಕ್ರಿ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವತ್ತೂ ಸ್ವಾಧೀನ ಇಲ್ಲದ ಕಾರಣ ನನಗೆ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಯಾವತ್ತೂ ಜಂಟಿಯಾಗಿ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.